ಬೇಸರ ಪಡಬೇಕೋ ಎಂಬುದನ್ನು ನಿರ್ಧರಿಸದಾದ. ನಾಥಜಿ ಏನು ಮಾಡಿರಬಹುದು? ಎಂದು ಮತ್ತೆ ಯೋಚಿಸಿದ. ಅವನಿಗೆ ಒಂದೂ ಹೊಳೆಯುತ್ತಿರಲಿಲ್ಲ. ಆಗಲೇ ಅಂಚೆಯವನು ನಾಥಜಿಯ ಪತ್ರವನ್ನು ತಂದ.

ಶ್ರೀಕಂಠ ಅವನ ಕೈಯಿಂದ ಕವರ್ ತೆಗೆದುಕೊಂಡ. ಹೌದು, ಪತ್ರವನ್ನು ನಾಥಜಿಯೇ ಬರೆದಿದ್ದ. ಅವನ ಕೈಬರಹವೇ ಆಗಿತ್ತು. ತಮ್ಮನ ವಿಧೇಯತೆಗೆ ಸಂತಸಗೊಂಡ. ಅವನ ಬಗ್ಗೆ ಸ್ನೇಹ ಹೆಚ್ಚಿತು. ಆದರೆ, ಕವರ್ ಒಡೆಯುವಾಗ ಶರೀರ ಕಂಪಿಸಿತು. ಎದೆಯ ಬಡಿತ ಜೋರಾಯಿತು. ಕಣ್ಣುಗಳೆದುರು ಕತ್ತಲು ಕವಿಯಿತು. ಕವರಿನಲ್ಲಿದ್ದ ಪತ್ರವನ್ನು ಹೊರ ತೆಗೆದಾಗ ಕ್ಷಣಕಾಲ ಅದು ಖಾಲಿ ಪತ್ರವೆಂದು ಕಂಡಿತು. ಇಲ್ಲ ಇಲ್ಲ, ಅದು ಅವನ ಭ್ರಮೆಯಾಗಿತ್ತು. ಶ್ರೀಕಂಠ ತನ್ನ ಕನ್ನಡಕವನ್ನು ಒರಸಿದ. ಮೊದಲು ಪತ್ರದಲ್ಲಿ ಕೆಲವು ಅಸ್ಪಷ್ಟ ಆಕೃತಿಗಳು ಕಂಡವು, ಆದರೆ ಶೀಘ್ರವೇ ಅಕ್ಷರಗಳು ಸ್ಪಷ್ಟವಾಗಿ ಹೇಳಲಾರಂಭಿಸಿದವು. ಶ್ರೀಕಂಠ ಉಸಿರು ಬಿಗಿಹಿಡಿದು ಒಂದೊಂದು ಅಕ್ಷರ ಮತ್ತು ಒಂದೊಂದು ಶಬ್ದಗಳನ್ನು ಓದಲಾರಂಭಿಸಿದ.

"ಅಣ್ಣಾ, ನಮಸ್ಕಾರ. ನೀವು ದೀರ್ಘಾಯುವಾಗಿ ಎಂದು ಬಯಸುತ್ತೇನೆ.

ನನಗೆ ನಿಮ್ಮ ವಿವಶತೆ ಮತ್ತು ಅಸಹಾಯಕತೆ ಚೆನ್ನಾಗಿ ತಿಳಿಯುತ್ತದೆ. ಯಾವ ಅಣ್ಣ ನನ್ನನ್ನು ಮಗನಂತೆ ಸಾಕಿ–ಸಲಹಿ, ಯೋಚನೆ ಮಾಡುವುದನ್ನು ಕಲಿಸಿದನೋ, ಅವನ ಮಾತುಗಳು ಸರಿಯಾಗಿದ್ದು ತೂಕವಾಗಿಯೇ ಇರುವುದೆಂಬ ವಿಶ್ವಾಸ ನನಗಿದೆ. ಆದರೆ, ನೀವೂ ಯೋಚಿಸಿ, ನಾನು ನನ್ನ ಪರಿವಾರವನ್ನು ಎಲ್ಲಿಗೆ ಒಯ್ಯಲಿ?

ನೀವು ಖಂಡಿತ ನಿಮ್ಮ ಹಿಸ್ಸೆಯನ್ನು ಮಾರಿ. ಬೇಕಾದವರಿಗೆ ಮಾರಿ. ನೀವೇಕೆ ನನ್ನ ಬಗ್ಗೆ ಚಿಂತಿಸುತ್ತೀರಿ? ಖರೀದಿಸುವವರು ಮುಸಲ್ಮಾನರಾದರೆ ನನಗೆ ವ್ಯತ್ಯಾಸ ಕಾಣಲ್ಲ. ನಾನಿರುವ ಮೊಹಲ್ಲಾದಲ್ಲಿ ಯಾವ ಜನರಿರುತ್ತಾರೆ? ನಾನು ತರಕಾರಿಗಳನ್ನು ಎಲ್ಲಿಂದ ತರುತ್ತೇನೆ? ಮೀನು–ಮಾಂಸ ಯಾವ ಜನರಿಂದ ಕೊಳ್ಳುತ್ತೇನೆ? ನನ್ನ ಮಲ ಮೂತ್ರ ಮತ್ತು ಮನೆಯ ಕಸವನ್ನು ಯಾರು ತೆಗೆಯುತ್ತಾರೆ? ನಾನು ದೇವರಿಗೆ ಅರ್ಪಿಸುವ ಹೂವುಗಳನ್ನು ಯಾರು ಬೆಳೆಯುತ್ತಾರೆ? ನನ್ನನ್ನು ತಾಯಿಯ ಹೊಟ್ಟೆಯಿಂದ ಹೊರತೆಗೆದ ದಾದಿ ಸಹ ಮುಸಲ್ಮಾನಳಾಗಿದ್ದಳು. ನಾನು ಸತ್ತ ನಂತರ ನನ್ನ ಚಿತೆಯನ್ನು ಸಿದ್ಧಪಡಿಸುವವನೂ ಮುಸಲ್ಮಾನನೇ ಆಗಿರುತ್ತಾನೆ.

ನೀವು ನನ್ನ ಬಗ್ಗೆ ಚಿಂತಿಸಬೇಡಿ. ದೇವರು ನಿಮ್ಮನ್ನು ಸುಖವಾಗಿಡಲಿ.

ಶ್ರೀಕಂಠ ಪತ್ರವನ್ನು ಎರಡು ಬಾರಿ, ಮೂರು ಬಾರಿ ಓದಿದ. ಅವನ ಮೂಗಿನ ಹೊಳ್ಳೆಗಳು ಬಡಿದುಕೊಂಡವು. ಅವನ ಬಾಯಿಯಿಂದ ತನ್ನಷ್ಟಕ್ಕೆ ತಾನೇ ಜುಗುಪ್ಸೆ ಮತ್ತು ನೋವಿನ ಶಬ್ದಗಳು ಹೊರ ಬಂದವು, 'ಬ್ಲಡಿಫೂಲ್! ಅವನ ತಲೆ ಕೆಟ್ಟಿದೆ!' ನಂತರ ಅವನು ಪತ್ರವನ್ನು ಚೂರುಚೂರು ಮಾಡಿ ಕಿಡಕಿಯಿಂದ ಹೊರಗೆಸೆದ, ಅವನ ಉಸಿರಾಟ ಜೋರಾಯಿತು. ಎದೆ ರಭಸದಿಂದ ಬಡಿದುಕೊಂಡಿತು. ಹೌದು, ಅದೇ ವೃಕ್ಷ! ದೂರ ದೂರದವರೆಗೆ ತನ್ನ ಕೊಂಬೆಗಳನ್ನು ಚಾಚಿದ ವೃಕ್ಷ. ಆದರೆ, ಬೇರುಗಳಿಲ್ಲದೆಯೇ ಎಲ್ಲಿಯವರೆಗೆ ನಿಲ್ಲುವುದು? ಅದು ಈಗಲೇ ಬೀಳುವುದು. ಈಗಲೇ, ಬೀಳುವುದು!!

ಶ್ರೀಕಂಠನ ತಲೆ ಸುತ್ತಿತು. ಅವನು ಕೆಳಗೆ ಬಿದ್ದ. ಸುಮಾರು ಎರಡು ಗಂಟೆಗಳ ನಂತರ ಪ್ರಜ್ಞೆ ಬಂತು. ಪ್ರಜ್ಞೆ ಬಂದ ನಂತರವೂ ಅವನ ಪರಿಸ್ಥಿತಿಯಲ್ಲಿ ಸುಧಾರಣೆಯಾಗದೆ, ಹದಗೆಟ್ಟಿತು.

ಅನೇಕ ದಿನಗಳ ನಂತರ ಶೀಲಾಳ ಪತಿ ಅಂದರೆ ಅವನ ಅಳಿಯ ಎಲ್ಲಾ ಕಾಗದ–ಪತ್ರಗಳೊಂದಿಗೆ ಒಂದು ಚೆಕ್ ಕಳುಹಿಸಿದ, ಅದರೊಂದಿಗೆ ಒಂದು ಪತ್ರವನ್ನೂ ಲಗತ್ತಿಸಿದ್ದ. ಪತ್ರದಲ್ಲಿ, ಇಂಥದ್ದೇ ಒಂದು ಚೆಕ್ಕನ್ನು ದಿಲ್ಲಿಯಲ್ಲಿರುವ ಸಹೋದರನಿಗೆ ಕಳುಹಿಸಿರುವುದಾಗಿ ಬರೆದಿದ್ದ. ಅದರೊಂದಿಗೆ, ವಾರದ ನಂತರ ಅವನ ಸಹೋದರ ನಾಥಜಿ ಸಹ ತನ್ನ ಹಿಸ್ಸೆಯನ್ನು, ಶ್ರೀಕಂಠ ಮತ್ತು ಅವನ ದಿಲ್ಲಿ ಸಹೋದರನ ಹಿಸ್ಸೆಯನ್ನು ಖರೀದಿಸಿದ ಆ ಕಾದಿರ್ ಜೂಗೇ ಮಾರಿದ್ದಾಗಿಯೂ ತಿಳಿಸಿದ್ದ. ನಾಥಜಿ ಈಗ ತನ್ನ ಪರಿವಾರದೊಂದಿಗೆ ಅದೇ ಬಾಡಿಗೆ ಮನೆಯಲ್ಲಿದ್ದಾನೆಂದೂ ಬರೆದಿದ್ದ.

ಪತ್ರ ಓದಿ ಶ್ರೀಕಂಠನ ಮುಚ್ಚಿದ ಕಣ್ಣುಗಳು ಎರಡು ಡೊಗರುಗಳಾಗಿ ಪರಿವರ್ತನೆಗೊಂಡವು, ಒಳಗಿನ ಕೀವು ಉರಿಯುವ ಲಾವಾರಸವಾಗಿ ಆ ಮಾರ್ಗವಾಗಿ ಹೊರ ಬರಲಾರಂಭಿಸಿತು.

●